ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಶ್ರೀ ಕಮರುತ್ ಇಸ್ಲಾಂ ಅವರು ಎತ್ತಿರತಕ್ಕ ವಿಚಾರವನ್ನು ಸಮರ್ಥಿಸುತ್ತಾ, ಪೋಲೀಸ್ ಠಾಣೆಯಲ್ಲಿ ಏನು ರಕ್ಷಣೆ ಕೊಡಬೇಕಾಗಿತ್ತು ಅಲ್ಲೇ ಇವತ್ತಿನ ದಿವಸ ಕೊಲೆ ಆಗತಕ್ಕ ಪರಿಸ್ಥಿತಿಗೆ ಹೋಗಿದೆ. ಜನರು ರಕ್ಷಣೆಗೋಸ್ಕರ ಹೋದರೆ ಅಲ್ಲೇ ಜನರ ಹತ್ಯೆಯಾದರೆ ಪೊಲೀಸ್ ಠಾಣೆಗಳು ಏತಕ್ಕಾಗಿ ಇವೆ ಎಂದು ಯೋಚನೆ ಮಾಡಿಕೊಳ್ಳಬೇಕಾಗುತ್ತದೆ. ದಯವಿಟ್ಟು ಗೃಹ ಮಂತ್ರಿಗಳನ್ನು ಕರೆಸಿ ಈ ಬಗ್ಗೆ ವಿವರವಾದ ಹೇಳಿಕೆ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ವಿಚಾರ. ಲಾಕಪ್ ಡೆತ್ಸ್ ಬಗ್ಗೆ ಒಂದೊಂದು ಸದನದಲ್ಲಿ ಒಂದೊಂದು ವಾರ ಚರ್ಚೆಯಾಗತಕ್ಕದ್ದು ಉಂಟು. ನಾವು ಪತ್ರಿಕಾ ವರದಿಯ ಆಧಾರದ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಅದು ಬಿಟ್ಟರೆ ಮಾಹಿತಿ ನಮಗೆ ಸಿಗುವುದಿಲ್ಲ. ಸದನ ನಡೆಯತಕ್ಕ ಕಾಲದಲ್ಲಿ ಸರಿಯಾದ ಮಾಹಿತಿ ಒದಗಿಸತಕ್ಕದ್ದು ಸರ್ಕಾರದ ಜವಾಬ್ದಾರಿ. ಈ ಸಂದರ್ಭದಲ್ಲಿ ಈ ಸದರಿ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಅಲ್ಲಿ ಈಗಾಗಲೇ ಉಪವಾಸ ಕುಳಿತಿದ್ದಾರೆ. ಪರಿಸ್ಥಿತಿ ಎಲ್ಲಿಗೆ ಹೋಗುತ್ತದೆಂದು ಗೊತ್ತಿಲ್ಲ. ಆದ್ದರಿಂದ ಮಾನ್ಯ ಗೃಹ ಸಚಿವರಿಗೆ ಹೇಳಿಕೆ ಮಾಡುವಂತೆ ಒತ್ತಾಯಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಬೆಳಿಗ್ಗೆ ತಮ್ಮನ್ನು ಭೇಟಿ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿದ್ದೇನೆ. ಇದು ಬಹಳ ಪ್ರಾಮುಖ್ಯವಾದ ವಿಷಯ. ಗುಲ್ಬರ್ಗಾ ಒಂದೇ ಕಡೆ ಅಲ್ಲ, ಅನೇಕ ಕಡೆ ಇದು ನಡೆಯುತ್ತಿದೆ. ಇದಕ್ಕೇನಾದರೂ ಒಂದು ಪರಿಹಾರ ಕಂಡುಹಿಡಿಯಬೇಕಾಗುತ್ತದೆ. ಆದ್ದರಿಂದ ಮಾನ್ಯ ಸಚಿವರು ಬಂದು ಈ ಬಗ್ಗೆ ಏನಾಗಿದೆ, ಕೂಲಂಕುಷವಾದ ವಿಚಾರ ಏನು, ನ್ಯಾಯಾಂಗ ತನಿಖೆ ಆಗಬೇಕೇ ಏನು ಎಂಬುದನ್ನು ಹೇಳಬೇಕು. ನಾವೆಲ್ಲಾ ನ್ಯಾಯಾಂಗ ತನಿಖೆ ಆಗಬೇಕು ಎಂದು ಒತ್ತಾಯ ಮಾಡುವವರು. ಹಿಂದೆ ಇದೇ ಸದನದಲ್ಲಿ 1969–70ರ ಸಂದರ್ಭದಲ್ಲಿ ಮುನಿಯಮ್ಮನ ಪ್ರಕರಣ ಒಂದು ನಡೆದು ಬಹುಶಃ ನನಗನ್ನಿಸುತ್ತದೆ ಆರು ದಿನಗಳ ಕಾಲ ಚರ್ಚೆ ನಡೆಯಿತು. ಈ ರೀತಿ ಲಾಕಪ್‌ನಲ್ಲಿ ಸಾವುಗಳು ಅನೇಕ ಕಡೆ ನಡೆಯುತ್ತಿವೆ. ಈ ಬಗ್ಗೆ ಒಂದು ಸಮಗ್ರವಾದಂಥ ಚರ್ಚೆ ಆಗಬೇಕಾಗಿದೆ. ದಯಮಾಡಿ ಅದಕ್ಕೆ ಶಾವು ಅವಕಾಶ ಕಲ್ಪಿಸಿಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ.

ದ.ಅ. 3 ವಿಷಯ : ಕಂಪ್ಯೂಟರ್ ಖರೀದಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ :

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈಗಾಗಲೇ ತಮ್ಮನ್ನು ಭೇಟಿ ಮಾಡಿ 100 ಕಂಪ್ಯೂಟರ್‌ಗಳನ್ನು 5 ಕೋಟಿ 27 ಲಕ್ಷ ರೂಪಾಯಿಗೆ ಒಂದೇ ದಿವಸದಲ್ಲಿ ಅಜ್ಜಿ ಮಾಡಿ ಇವತ್ತು ಏನು ಖರೀದಿ ಮಾಡಿದ್ದಾರೆ ಅದರಲ್ಲಿ ದೊಡ್ಡ ಅನ್ಯಾಯ ನಡೆದಿದೆ, ಅವ್ಯವಹಾರ ನಡೆದಿದೆ ಎಂದು ನಿಯಮಬದ್ಧವಾಗಿ ಈಗಾಗಲೇ ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ಯಾವ ಕಂಪ್ಯೂಟರ್ ಅನಗತ್ಯವಾಗಿತ್ತೋ ಅದರ ಕಾಲು ಭಾಗದ ದರಕ್ಕೆ ಕಂಪ್ಯೂಟರ್ ಹೊರಗಡೆ ಸಿಗುತ್ತದೆ. ಸುಮಾರು ಮೂರು ಮುಕ್ಕಾಲು ಕೋಟಿ ರೂಪಾಯಿನ ದುರ್ವ್ಯವಹಾರ ನಡೆದಿರುವ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಈಗ ಚರ್ಚೆಯಾಗುತ್ತಿದೆ. ಇಲ್ಲಿ ವಿಧಾನಸಭೆಯಲ್ಲಿ ನಾನು ನೋಟೀಸ್ ಕಳುಹಿಸಿದ್ದೇನೆ. ದಯಮಾಡಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಯಾವ ರೂಪದಲ್ಲಾದರೂ ತಾವು ಅವಕಾಶ ಕೊಡಿ. ಏಕೆಂದರೆ ಇದು ಮೂರು ಕೋಟಿ ರೂಪಾಯಿನ ದುರ್ವ್ಯವಹಾರ.

ಅಧ್ಯಕ್ಷರು : ಪರಿಶೀಲಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದೇ ದಿವಸದಲ್ಲಿ ಅಡ್ವಾನ್ಸ್ ಕೂಡ ಕೊಟ್ಟಿದ್ದಾರೆ. ಅಡ್ವಾನ್ಸ್ ಕೊಟ್ಟಿರುವುದಕ್ಕೆ ಯಾವುದೇ ಗ್ಯಾರಂಟಿ ತೆಗೆದುಕೊಂಡಿಲ್ಲ. ಇವತ್ತು ಕಂಪ್ಯೂಟರ್ ಅಗತ್ಯ ಇತ್ತೋ ಇಲ್ಲವೋ ಗೊತ್ತಿಲ್ಲ. ಈ ಕಂಪ್ಯೂಟರ್‌ಗಳ ಅಗತ್ಯ ಇಲ್ಲ ಎಂದು ಎಕ್ಸ್‌ಪರ್ಟ್ಸ್ ಒಪೀನಿಯನ್ ಕೊಟ್ಟಿದ್ದಾರೆ. ಸುಮಾರು 3 ಕೋಟಿ ರೂಪಾಯಿ ನುಂಗುವ ಕೆಲಸ ನಡೆದಿದೆ. ಇದರಲ್ಲಿ ಉನ್ನತ ಅಧಿಕಾರಿಗಳ ಹಿರಿಯ ಸಚಿವರ ಕೈವಾಡ ಇದೆ ಎಂಬುದಕ್ಕೆ ದಾಖಲೆ ಇದೆ.

ಅಧ್ಯಕ್ಷರು : ಪರಿಶೀಲಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಯಾವುದೇ ಟೆಂಡರ್ ಕರೆಯದ ಅಡ್ವಾನ್ಸ್ ಕೊಟ್ಟಿದ್ದಾರೆ. ಇದರಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ಆಗಿದೆ.

ಅಧ್ಯಕ್ಷರು : ಪರಿಶೀಲಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. 2 ಕೋಟಿ ರೂಪಾಯಿ ಅಡ್ವಾನ್ಸ್ ಕೊಡಿಸಿ ನಾನು 100 ಕಂಪ್ಯೂಟರ್‌ಗಳನ್ನು ಕೊಡಿಸುತ್ತೇನೆ.

ಅಧ್ಯಕ್ಷರು : ನಿಮ್ಮ ನೋಟೀಸ್ 9–45 ಘಂಟೆಗೆ ಬಂದಿದೆ, ಪರಿಶೀಲಿಸುತ್ತೇನೆ.

ಅಧ್ಯಕ್ಷರು : ಬಿ.ಎಸ್. ಯಡಿಯೂರಪ್ಪ : 100 ಕಂಪ್ಯೂಟರ್‌ಗಳನ್ನು ಸೇಮ್ ಕಂಪನಿಯಿಂದ ಕೊಡಿಸುತ್ತೇನೆ. ಇದು 3 ಕೋಟಿ ರೂಪಾಯಿ ನುಂಗಿರುವ ಹಗಲು ದರೋಡೆ ಈ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕು.

ಅಧ್ಯಕ್ಷರು : ಮುಗಿಯಿತು ಬಿಡಿ ಯಡಿಯೂರಪ್ಪನವರೇ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಆಯಿತು. ಮಾಡಿಕೊಡೋಣ. ಪರಿಶೀಲಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 3 ಕೋಟಿ ರೂಪಾಯಿ ದುರ್ವ್ಯವಹಾರ ನಡೆದಿರುವ ಘಟನೆ ಸ್ವಾಮಿ ಇದು.

ಅಧ್ಯಕ್ಷರು : ನಾನು ವಿರೋಧ ಪಕ್ಷದ ನಾಯಕರನ್ನು ಕರೆದಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :

ಮಾನ್ಯ ಅಧ್ಯಕ್ಷರೆ, ನಾನು ಕಳುಹಿಸಿರುವ ನಿಲುವಳಿ ಸೂಚನೆ 9 ಘಂಟೆಗೆ ಸರಿಯಾಗಿ ತಲುಪಿರತಕ್ಕದ್ದು. ಪೂರ್ಣ ಸಮಯ ಕೊಟ್ಟು ಕಳುಹಿಸತಕ್ಕದ್ದು ಕುಣಿಗಲ್ ಪ್ರಕರಣದ ಬಗ್ಗೆ ಒಂದು ನಿಲುವಳಿ ಸೂಚನೆ ಕಳುಹಿಸಿದ್ದೇನೆ. ಅದಕ್ಕೆ ಎಲ್ಲಾ ಪಕ್ಷಗಳ ಮುಖಂಡರುಗಳು ಸಹಿ ಹಾಕಿದ್ದಾರೆ. ಅದು ಹೊತ್ತಿಗೆ ಸರಿಯಾಗಿ ಹೋಗಿದೆ. ಅದು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲವೇ? ಇದರಲ್ಲಿ ತಾಂತ್ರಿಕ ತೊಡಕುಗಳಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು 11 ಘಂಟೆಗಿಂತ ಮುಂಚೆ ನೋಟೀಸ್ ಕೊಟ್ಟಿದ್ದೇನೆ ಸ್ವಾಮಿ. ಇವತ್ತು ಕೊಟ್ಟಿದ್ದೇನೆ. ಮೂರು ದಿವಸ ಮುಂಚೆ ಕೊಟ್ಟಿದ್ದು ತೆಗೆದುಕೊಂಡಿದ್ದಾರೆ. ಇವತ್ತು ಸಮಯಕ್ಕೆ ಸರಿಯಾಗಿ ನಾನು ಕಳುಹಿಸಿಕೊಟ್ಟಿದ್ದೇನೆ. ಕುಣಿಗಲ್ ಹಗರಣದ ಬಗ್ಗೆ ಸರ್ಕಾರ ಉತ್ತರ ಕೊಡಬೇಕಾಗಿದೆ. ಕುಣಿಗಲ್‌ನಲ್ಲಿ ನಡೆದಂಥ ಹಗರಣ ಏನಿದೆ....

† ದ.ಅ. 4 ವಿಷಯ : ಕುಣಿಗಲ್‌ನಲ್ಲಿ ನಡೆದಂಥ ಕೊಲೆ ಘಟನೆ ಬಗ್ಗೆ

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಕಳುಹಿಸಿರತಕ್ಕ ನಿಲುವಳಿ ಸೂಚನೆ, ಈ ರಾಜ್ಯದಲ್ಲಿ ಒಂದು ಉಪಚುನಾವಣೆ ನಡೆಯಿತು. ಕಳೆದ ತಿಂಗಳು 8ನೇ ತಾರೀಖು ನಡೆಯಿತು. ಆ ದಿವಸ ಕುಣಿಗಲ್‌ನಲ್ಲಿ ಒಂದು ಪ್ರಕರಣ ನಡೆಯಿತು. ಅದು ಪತ್ರಿಕೆಗಳಲ್ಲಿ ಬಂದಿದೆ. ನಾವು ವಿರೋಧ ಪಕ್ಷದವರು ಒಟ್ಟಾರೆ ರಾಜ್ಯಪಾಲರನ್ನು ಕಂಡು ಮನವಿ ಸಲ್ಲಿಸಿದ್ದೇವೆ. ಉಪವಾಸ ಕೂತಿದ್ದೇವೆ. ಎಲ್ಲಾ ವಿರೋಧ ಪಕ್ಷದ ನಾಯಕರು ಸುಮಾರು 80 ಕಿಲೋಮೀಟರ್‌ವರೆಗೆ ಪಾದಯಾತ್ರೆ ಮಾಡಿದ್ದೇವೆ. ಬಹಳ ಮುಖ್ಯವಾಗಿರತಕ್ಕದ್ದು ಏನೆಂದರೆ ಗಂಗಯ್ಯ ಎಂಬುವವರು ಕೊಲೆಗೀಡಾಗಿದ್ದಾರೆ ಎಂದು ಹೇಳುವುದಕ್ಕೆ ಸಂಬಂಧಪಟ್ಟ ಇಲಾಖೆಯವರು ಕೇಸನ್ನು ದಾಖಲು ಮಾಡಿಕೊಂಡಿದ್ದಾರೆ. ಎಫ್.ಐ.ಆರ್. ಪ್ರತಿ ಇಲ್ಲಿದೆ. ಅದನ್ನು ತಮ್ಮ ಟೇಬಲ್ ಮೇಲೆ ಇಡುತ್ತೇನೆ. ದಿನಾಂಕ 8–6–1992ರಂದು ಮಧ್ಯಾಹ್ನ 12 ಘಂಟೆಯಿಂದ ಸಂಜೆ 6 ಘಂಟೆಯವರೆಗೆ ಕುಣಿಗಲ್ ಟೌನ್ ಪ್ರವಾಸಿ ಮಂದಿರದ ಹತ್ತಿರ ಪೂರ್ವ ದಿಕ್ಕಿಗೆ ಸುಮಾರು 2 ಕಿಲೋಮೀಟರ್‌ನಲ್ಲಿ ಈ ಘಟನೆ ನಡೆದಿದೆ. ಇದನ್ನು ರಿಜಿಸ್ಟರ್ ಮಾಡಿಕೊಂಡಿದ್ದಾರೆ. 302ನೇ ಸೆಕ್ಷನ್‌ನಂತೆ ಕೇಸ್ ರಿಜಿಸ್ಟರ್ ಆದಮೇಲೆ ಪ್ರಾರಂಭಿಕವಾಗಿ ನಡೆಯತಕ್ಕ ಮೊದಲನೇ ಕೆಲಸ ಎಂದರೆ ಸಂಬಂಧಪಟ್ಟ ಅಪರಾಧಿಯನ್ನು ಬಂಧನ ಮಾಡತಕ್ಕದ್ದು. ಇಲ್ಲಿ ಎರಡನೇ ಅಪರಾಧಿ ಇಲ್ಲ. ಒಬ್ಬರೇ ಅಪರಾಧಿ. ಗಂಡನನ್ನು ಕಳೆದುಕೊಂಡಿರತಕ್ಕ ಹೆಣ್ಣು ಮಗಳು ಅಪರಾಧಿ ಯಾರು ಎಂದು ಗುರುತಿಸಿ ತಮ್ಮ ಕಂಪ್ಲೇಂಟ್ ಕೊಟ್ಟಿದ್ದಾಳೆ. ಮಾನ್ಯ ಅಧ್ಯಕ್ಷರೆ, ಇಲ್ಲಿ